## ಕಂಟ್ರೋಲ್ ಬಟ್ಟೆ ಯೋಜನೆ

ಶ್ರೀ ಬೈರೇಗೌಡ (ಪೆಮಗರ್) —

೨೫ (೪೫) ಆಹಾರ ಹಾಗೂ ನಿತ್ಯೋಪಯೋಗಿ ಸರಬರಾಜು ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಕಂಟ್ರೋಲ್ ಬಟ್ಟೆಯ ಯೋಜನೆಯನ್ನು ಜಾರಿಗೆ ತಂದಿದ್ದು ಎಂದಿನಿಂದಾ ;

(ಆ) ಈ ಯೋಜನೆಯಂತೆ ರಾಜ್ಯಕ್ಕೆ ಕೇಂದ್ರ ಸರಕಾರದಿಂದ ಪ್ರತಿ ವರ್ಷ ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೆ ಗೊತ್ತು ಮಾಡಿದ ಬಟ್ಟೆಯು ಪ್ರಮಾಣವೆಷ್ಟು :

(ಇ) ಕೇಂದ್ರ ಸರಕಾರ ಗೊತ್ತುಪಡಿಸಿದ ಬಟ್ಟೆಯು ಪೂರ್ಣ ಪ್ರಮಾಣವನ್ನು ರಾಜ್ಯದಲ್ಲಿ ಹಂಚಲಾಗಿದೆಯೇ ; ಹಾಗಿದ್ದಲ್ಲಿ, ಹಂಚಲಾದ ಬಟ್ಟೆಯ ಪ್ರಮಾಣವನ್ನು ಜಿಲ್ಲಾವಾರು ಕೊಡಲಾಗುತ್ತಿದೆಯೆ :

(ಈ) ಹಾಗಿಲ್ಲವಿದ್ದಲ್ಲಿ, ಕಾರಣಗಳೇನು :

(ಉ) ಈ ಯೋಜನೆಯು ಮೂರಂಕಕಳೆದ ೩ ವರ್ಷಗಳಲ್ಲಿ ರಾಜ್ಯದ ಜನತೆಗೆ ಪ್ರತಿವರ್ಷ ಒದಗಿರುವ ಬಟ್ಟೆಯ ಪ್ರಮಾಣವೆಷ್ಟು (ಜಿಲ್ಲಾವಾರು ಲೆಕ್ಕ ಕೊಡುವುದು) ;

(ಊ) ಈ ಬಗ್ಗೆ ಬಟ್ಟೆಯ ಗಿರಣಿಗಳಿಗೆ ರಾಜ್ಯ ಸರಕಾರವೇನಾದರೂ ಸಬ್ಸಿಡಿ ಕೊಟ್ಟಿದ್ದಾರೆಯೆ ; ಹಾಗಿದ್ದಲ್ಲಿ, ಕೊಟ್ಟಿರುವ ಮೊತ್ತವೆಷ್ಟು ; ಮತ್ತು ಅವುಗಳು ಯಾವುವು ;

(ಋ) ರಾಜ್ಯಮಟ್ಟದಲ್ಲಿ ಈ ಬಟ್ಟೆಯು ಹಂಚಿಕೆ ಜವಾಬ್ದಾರಿಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ ; ಈ ಸಂಸ್ಥೆಯಲ್ಲಿ ಹಂಚಲಾಗದೇ ಇರುವ ಬಟ್ಟೆಯು ಪ್ರಮಾಣವೆಷ್ಟು ; ಮತ್ತು ಇವಕ್ಕೆ ಕಾರಣಗಳೇನು ;

(ಋ) ಈ ಯೋಜನೆ ಜಾರಿಗೆ ತಂದಾಗ ಸಾಧಾರಣ ಮತ್ತು ಮಾಧ್ಯಮ, ಉತ್ತಮ ತರಗತಿಯ ಬಟ್ಟೆಗೆ ಒಂದು ಪದರ ವಿಸ್ತಾರ ಬೆಲೆ ಏನು ; ಹಾಲಿ ಇರುವ ಬೆಲೆಯೇನು

(ಎ) ಈ ಬಟ್ಟೆಯು ಗುಣಮಟ್ಟವು ಕ್ರಮೇಣ ಕಡಿಮೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಆ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮಗಳೇನು ;

(ಏ) ಈ ಬಟ್ಟೆಯು ಹಂಚಿಕೆಯಲ್ಲಿ ದುರ್ವ್ಯವಹಾರವೇನಾದರೂ ನಡೆದಿದೆಯೆ ; ನಡೆದಿದ್ದಲ್ಲಿ, ಇದರ ವಿವರಗಳನ್ನು ತಪ್ಪೆಯು ಮುಂದಿಡಲಾಗುವುದೇ ?

ಶ್ರೀಮತಿ ಇ.ಇ. ವಾಜ್ (ಆಹಾರ ಹಾಗೂ ನಿತ್ಯೋಪಯೋಗಿ ಸರಬರಾಜು ಮಂತ್ರಿಗಳು).—

(ಅ ಕಂಟ್ರೋಲ್ ಬಟ್ಟೆಯ ಯೋಜನೆಯನ್ನು ಭಾರತ ಸರಕಾರದವರು ತಾ ೧-೧೧-೧೯೭೨ ರಿಂದ ಜಾರಿಗೆ ತಂದಿದ್ದಾರೆ.

(ಆ) ೧-೧೧-೭೨ ರಿಂದ ೩೦-೪ ೭೪ ರವರೆಗೆ ಪ್ರಪಾ ಸಂಖ್ಯೆಗೆ ಅನುಗುಣವಾಗಿ (೧೯೭೧ ಜನಗಣತಿ ಪ್ರಕಾರ) ೧೧೮೯ ಬೇಲುಗಳನ್ನು ತಿಂಗಳೊಂದಕ್ಕೆ ಗೊತ್ತು ಮಾಡಲಾಗಿದೆ.
೧-೫ ೭೪ ರಿಂದ ೨,೩೭೮ ಬೇಲುಗಳನ್ನು ತಿಂಗಳೊಂದಕ್ಕೆ ನಿಗಧಿಮಾಡಲಾಗಿದೆ.

(ಇ) ಹೌದು.

(ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಉ) ಜಿಲ್ಲಾವಾರು ಲೆಕ್ಕದ ಪಟ್ಟಿ ಲಗತ್ತಿಸಿದೆ.

(ಊ) ಇಲ್ಲ.

(ಋ) ಕರ್ನಾಟಕ ಸಹಕಾರಿ ಬಳಕೆದಾರರ ಮಹಾ ಮಂಡಳಿ, ಬೆಂಗಳೂರು ಈ ಸಂಸ್ಥೆಗೆ ಹಂಚಲಾದ ಬಟ್ಟೆಯನ್ನು ಪೂರ್ಣವಾಗಿ ಹಂಚಲಾಗಿದೆ, ಆದ್ದರಿಂದ ಕಾರಣಗಳು ಉದ್ಭವಿಸುವುದಿಲ್ಲ.

(ಋ).—

| | ಯೋಜನೆ ಜಾರಿಗೆ ತಂದಾಗ ಇದ್ದ ಬೆಲೆ | ಹಾಲಿ ಇರುವ ಬೆಲೆ |
|---|---|---|
| ೧. ಸಾದಾರಣ ಬಟ್ಟೆ (ಚ ಮೀಟರ್ ಒಂದಕ್ಕೆ) | ರೂ ೧-೧೦ | ರೂ ೧-೪೦ |
| ೨. ಮಧ್ಯಮ ತರಗತಿ ಬಟ್ಟೆ ,, ... | ರೂ. ೧-೫೭ | ರೂ. ೧-೭೨ |
| ೩. ಉತ್ತಮ ತರಗತಿ ಬಟ್ಟೆ ,, ... | ರೂ. ೧-೯೦ | ರೂ. ೨-೨೨ |

(ಎ) ಹೌದು. ಉತ್ತಮ ಬಟ್ಟೆ ನರಬರಾಜು ಮಾಡಲು ಕೇಂದ್ರ ನರಕಾರ ಮಿಲ್ಲುಗಳಿಗೆ ನಿರ್ದಿಷ್ಟವಾದ ಸೂಚನೆಗಳನ್ನು ಕೊಟ್ಟಿದೆ.

(ಏ) ಇಲ್ಲ

STATEMENT

Showing the details of Controlled Cloth supplied to each District during the year, 1973, 1974 and 1975.

| Sl No. | Name of the District | During the year 1973 (in bales) | During the year 1974 (in bales) | During the year 1975 (in bales) | Grand total (in bales) |
|---|---|---|---|---|---|
| 1 | Bangalore | 1476 | 2592¾ | 1198½ | 5267¼ |
| 2 | Belgaum | 2 | 1640 | 589¼ | 2231¼ |
| 3 | Bellary | 451 | 962 | 4683¾ | 1901¾ |
| 4 | Bidar | 130¼ | 626 | 306¼ | 1062½ |
| 5 | Bijapur | 679½ | 1380 | 758¾ | 2818¼ |
| 6 | Chickmagalur | 276¾ | 500 | 317 | 1093¾ |
| 7 | Chitradurga | 650 | 1152 | 460 | 2262 |
| 8 | Coorg | 26 | 260 | 157 | 443 |
| 9 | Dharwar | 844¼ | 1804 | 866 | 3514¾ |
| 10 | Gulbarga | 1225½ | 1673 | 967 | 3865½ |
| 11 | Hassan | 472¾ | 863 | 302 | 1637¾ |
| 12 | South Kanara | 748 | 1472 | 806½ | 3026½ |
| 13 | North Kanara | 677 | 551 | 240¼ | 1468¼ |
| 14 | Kolar | ... | 1101¼ | 607¾ | 1709 |
| 15 | Mandya | 421¼ | 726¾ | 410½ | 1558 |
| 16 | Mysore | 660 | 1615 | 476 | 2751 |
| 17 | Raichur | 97 | 894 | 438 | 1429 |
| 18 | Shimoga | 446¾ | 936 | 685 | 2067¾ |
| 19 | Tumkur | 15 | 888 | 602 | 1505 |
| | | 9299 | 21656¾ | 10657 | 41612¾ |

ಶ್ರೀ ಸಿ. ಬೈರೇಗೌಡ.—ತಾವು ಕೊಟ್ಟಿರುವ (ಈ) ಭಾಗದ ಉತ್ತರದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿರುತ್ತಿರಿ, ಆದರೆ ಅನೇಕ ಕಡೆ ಪರಿಸ್ಥಿತಿ ಏನಾಗಿದೆ ಎಂದರೆ ನೀವು ಕೊಟ್ಟಿರುವ ಬಟ್ಟೆಯಲ್ಲಿ ಗುಣಮಟ್ಟ ಇಲ್ಲವೇ ಇರುವುದರಿಂದ ಬೇಕಾದಷ್ಟು ಸ್ಟಾಕು ನಿಂತಿದೆ ಎಂದು ತಿಳಿದಿದೆ ಅವರ ಬಗ್ಗೆ ಅಂಕಿ ಅಂಶಗಳನ್ನು ಕೊಡುತ್ತೀರಾ ?

ಶ್ರೀಮತಿ ಇ. ಇ. ವಾಜ್ —ನಾವು ಆದಷ್ಟುಮಟ್ಟಿಗೂ ಜನಸಂಖ್ಯೆಗೆ ಅನುಗುಣವಾಗಿ ಈಗ ಬಟ್ಟೆಯನ್ನು ಹಂಚುತ್ತಿದ್ದೇವೆ. ಈಗ ನಿಮ್ಮ ಬಟ್ಟೆಯನ್ನು ರೂರಲ್ ಏರಿಯಾಗಳಲ್ಲಿ 126 ಕಡೆ ಹಂಚಲಾಗುತ್ತಿದೆ. ಪಟ್ಟಣಗಳಲ್ಲಿ 26 ಕಡೆ ಹಂಚಲಾಗುತ್ತಿದೆ. ಇನ್ನು ಎಲ್ಲಿಯಾದರು ಬಟ್ಟೆಯ ಬಗ್ಗೆ ಕೊರತೆ ಇದ್ದರೆ ಇನ್ನು ಹೆಚ್ಚು ಬಟ್ಟೆ ಹಂಚಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ —ತಾವು (ಖ)ಗೆ ಉತ್ತರವಾಗಿ "ಕರ್ನಾಟಕ ಸಹಕಾರಿ ಭಳಕೆದಾರರ ಮಹಾ ಮಂಡಳಿ, ಬೆಂಗಳೂರು ಈ ಸಂಸ್ಥೆಗೆ ಹಂಚಲಾದ ಬಟ್ಟೆಯನ್ನು ಪೂರ್ಣವಾಗಿ ಹಂಚಲಾಗಿದೆ. ಆದ್ದರಿಂದ ಕಾರಣಗಳು ಉದ್ಭವಿಸುವುದಿಲ್ಲ. ಎಂದು ಹೇಳಿದ್ದೀರಿ, ಆದರೆ ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಆ ಮಂಡಳಿಗೆ ವಿಸಿಟ್ ಕೊಟ್ಟಾಗ ಅವರು ಈ ಬಟ್ಟೆ ಖರ್ಚಾಗುತ್ತಿಲ್ಲ, ಲಕ್ಷಾಂತರ ರೂಪಾಯಿ ಬಟ್ಟೆ ಸ್ಟಾಕು ಇದೆ ಎಂದು ಹೇಳಿದರು. ಆದರೆ ತಾವು ಸಂಪೂರ್ಣವಾಗಿ ಹಂಚಿಕೆಯಾಗಿದೆ ಎಂದು ಹೇಳುತ್ತೀರಾ ಇದರಲ್ಲಿ ಯಾವುದು ಸರಿ ?

ಶ್ರೀಮತಿ ಇ. ಇ. ವಾಜ್.—ತಾವು ಕೇಳುವುದು ಜಿಲ್ಲೆಗಳಿಗೆ ಹಂಚಿರುವ ಬಟ್ಟೆಯೇ ಅಥವಾ ಸಹಕಾರ ಸಂಘಗಳಿಗೆ ಹಂಚಿರುವ ಬಟ್ಟೆಯೇ? ಸರಿಯಾಗಿ ಅರ್ಥವಾಗಲಿಲ್ಲ ಹಿಂದೆ ಒಂದು ಸಾರಿ ಇನ್‌ಫೀರಿಯರ್ ಕ್ವಾಲಿಟಿ ಬಂದಾಗ ಡಿಮ್ಯಾಂಡ್ ಇರಲಿಲ್ಲ. Cloth of better quality is being supplied though different co-operative societies. There is great demand for sarees, dhotis etc. They are being lifted. The only stock that was lifted was grey long cloth. We have put it in the open market and disposed it off.

ಶ್ರೀ ಕೆ. ಹೆಚ್. ಹನುಮೇಗೌಡ —ಅಧ್ಯಕ್ಷರೆ, ನಮ್ಮ ಹಾಸನ ಜಿಲ್ಲೆಗೆ ಕೊಟ್ಟಿರತಕ್ಕ ಬಟ್ಟೆ ಹತ್ತಾರು ಬೇಲ್ ಹಾಗೆ ಉಳಿದಿದೆ, ಇದರ ಬಗ್ಗೆ ಜನರನ್ನು ಕೇಳಿದರೆ ಅವರ್ನು ಪುಕ್ಕಟ್ಟೆ ಕೊಟ್ಟರೂ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಇಷ್ಟೊಂದು ಕೆಳಮಟ್ಟದ ಬಟ್ಟೆಯನ್ನು ಹಂಚುತ್ತಿದ್ದಾರೆ ಎನ್ನುವುದು ಇದನ್ನು ನೋಡಿದರೆ ಗೊತ್ತಾಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಹೇಳಿಕೊಳ್ಳುವುದೇನೆಂದರೆ ಸೊಸೈಟಿಗಳಲ್ಲಿ ಸ್ಟಾಕ್ ನಿಂತಿರತಕ್ಕ ಬಟ್ಟೆಯನ್ನು ವಾಪಸ್ಸು ತೆಗೆದು ಕೊಂಡು ಅವರಿಗೆ ಹಣ ವಾಪಸ್ಸು ಮಾಡುವ ಅನುಕೂಲ ಮಾಡುತ್ತೀರಾ ಎಂದು ಕೇಳುತ್ತೇನೆ ?

ಶ್ರೀಮತಿ ಇ. ಇ. ವಾಜ್.—ಇನ್ನು ಮುಂದೆ ಆದಷ್ಟು ಉತ್ತಮ ದರ್ಜೆಯ ಬಟ್ಟೆಯನ್ನು ತರಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಅಲ್ಲದೇ ಸಹಕಾರ ಸಂಘಗಳಲ್ಲಿ ಬಟ್ಟೆ ಸ್ಟಾಕು ಉಳಿದಿದ್ದರೆ ಅದನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ತಾವು ಪ್ರತಿಯೊಂದು ಜಿಲ್ಲೆಗೆ ಇಂತಿಷ್ಟು ಎಂದು ಬಟ್ಟೆಯನ್ನು ಹಂಚಬೇಕಾದರೆ ಯಾವ ಆಧಾರವ ಮೇಲೆ ಹಂಚ್ಚುತ್ತೀರಾ ?

SMT. E. E. VAZ.—So far we have taken the population of 1971 census as the basis but now a days, we are also considering supply of cloth to districts where there are backward people of vulnerable sections of people.

ಶ್ರೀ ಎಂ. ಎಸ್. ಕೃಷ್ಣನ್ – ಮಾನ್ಯ ಮಂತ್ರಿಗಳು (ಖ) ಪ್ರಶ್ನೆಗೆ ಉತ್ತರ ಕೊಡುತ್ತಾ, ಸಾಧಾರಣ ಬಟ್ಟೆ ಚ. ಮೀಟರು ಒಂದಕ್ಕೆ), ಯೋಜನೆ ಜಾರಿಗೆ ತಂದಾಗ 1-10 ರೂಪಾಯಿ ಇದ್ದು, ಹಾಲಿ 1-10 ರೂಪಾಯಿ ಎಂದೂ, ಹೇಳಿದ್ದಾರೆ. ಇದನ್ನು ನೋಡಿದಾಗ, ಒಟ್ಟು ಒಂದು ಚ. ಮೀಟರಿಗೆ 30 ಪೈಸೆ ಜಾಸ್ತಿಯಾಗಿರುವುದು ಕಂಡುಬರುತ್ತದೆ. ಹಾಗೆಯೇ ಉತ್ತಮ ತರಗತಿಯ ಬಟ್ಟೆಯ ಬೆಲೆಯಲ್ಲಿಯೂ ನಾವು ಹೆಚ್ಚಳವಾಗಿರುವುದನ್ನು ಕಾಣಬಹುದು. ಆದರೆ, (ಎ) ಪ್ರಶ್ನೆಗೆ

ಉತ್ತರವಾಗಿ, ಉತ್ತಮ ಬಟ್ಟೆ ನೇಯುವುದನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರ ಎಲ್ಲಗಳಿಗೆ ನಿರ್ದಿಷ್ಟವಾದ ನೂಲಿನ ಗಳನ್ನು ಕೊಟ್ಟಿದೆ ಎಂದು ತಿಳಿಸಿದ್ದಾರೆ. ಆದುದರಿಂದ, ಸಾಧಾರಣ ಮತ್ತು ಮಧ್ಯಮ ತರಗತಿ ಬಟ್ಟೆಗಳು ಪೂರೈಸಲಾಗದೇ ಉಳಿದಿರುವ ವೈಶಿಷ್ಟ್ಯವುಳ್ಳ ಉತ್ತಮ ತರಗತಿ ಬಟ್ಟೆಗಳನ್ನು ತಯಾರು ಮಾಡಲು ನೂಲಿನ ಕೊಟ್ಟಿದೆ ಎಂದು ಅರ್ಥ ಬರುತ್ತದೆ. ಆದುದರಿಂದ, ಇವನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರದವರು ಸಾಧಾರಣ ಮತ್ತು ಮಧ್ಯಮ ತರಗತಿಯ ಬಟ್ಟೆಗಳ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ ?

SMT. E. E. VAZ.—When it is said fine cloth, it is not terrylene or terrycot. But it is a little better cloth then coarse cloth. When we have instructed for production of better cloth, it does not mean the price will be enhanced. Of course one paise enhancement will meet the needs of the labourers But we will be reasonable.

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.—ನಮ್ಮ ರಾಜ್ಯದಲ್ಲಿ ಅನೇಕ ಸಹಕಾರ ಸಂಘಗಳು ಪಟ್ಟಭದ್ರಹಿತಾಸಕ್ತಿಗಳ ಕಿಡಿತದಲ್ಲಿರುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಈಗ ಸರ್ಕಾರದವರು ಬಟ್ಟೆಗಳನ್ನು ಅಂತಹ ಸಹಕಾರ ಸಂಘಗಳ ಮುಖಾಂತರ ಹಂಚಿಕೆ ವ್ಯವಸ್ಥೆ ಮಾಡುತ್ತಿದ್ದಾರೆ. ಆದರೆ, ಫಲ ಜನರಿಗೆ ಸೇರದೆ, ವ್ಯಾಪಾರಸ್ಥರು ಮತ್ತು ಅಂಗಡಿಯವರಿಗೆ ವಿತರಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೇನಾದರೂ ಬಂದರೆ, ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀಮತಿ ಇ. ಇ. ವಾಜ್.—ಸಹಕಾರ ಸಂಘ-ಸಂಸ್ಥೆಗಳು, ಜನರ ಸಂಘ-ಸಂಸ್ಥೆಗಳು ಏನಿವೆ ಇವುಗಳನ್ನು ದೇಶದ ಜನತೆಯ ಏಳಿಗೆಗೋಸ್ಕರ ಸ್ಥಾಪಿಸಲಾಗಿದೆ. ಇಂಥಾ ಸಹಕಾರ ಸಂಘಗಳಲ್ಲಿ ಏನಾದರೂ ದೋಷದೋಷಗಳು ನಡೆಯುತ್ತಿದ್ದರೆ, ಮಾನ್ಯ ಸದಸ್ಯರೆಲ್ಲಾ ಸೇರಿ ನಿರ್ಣಯಿಸಬೇಕಾಗುತ್ತದೆ. ಹಾಗೇನಾದರೂ ಕೆಲವು ಕಡೆಗಳಲ್ಲಿ ಸಹಕಾರ ಸಂಘಗಳಲ್ಲಿ ಮಾಡುತ್ತಿರುವ ಬಟ್ಟೆ ವಿತರಣೆಯು ನಮ್ಮರ್ಪಕವಾಗಿಲ್ಲ ಎಂದು ನಮಗೆ ಕಂಡುಬಂದರೆ, ಸ್ಥಳೀಯವಾಗಿ ಯಾರಿಗಾದರೂ ಪ್ರೈವೇಟ್ ಇಂಡಿವಿಜುಯಲ್ಸ್‌ಗೆ ವಹಿಸಿ ವಿತರಣೆ ಮಾಡುವ ಸಾಧ್ಯತೆ ಬಗ್ಗೆ ವಿಚಾರಮಾಡಿ ನೋಡುತ್ತೇವೆ.

ಶ್ರೀ ಬಾಪುಗೌಡ.—1-5-1974 ರಿಂದ ಪ್ರತಿ ತಿಂಗಳೊಂದಕ್ಕೆ 2378 ಬೇಲುಗಳನ್ನು ನಿಗದಿ ಮಾಡಲಾಗಿದೆ ಎಂದು ಮಾನ್ಯ ಮಂತ್ರಿಗಳ ಉತ್ತರದಲ್ಲಿ ತಿಳಿಸಿದ್ದಾರೆ. ಇದರಲ್ಲಿ ಬಹುಪಾಲು ರಾಂಗ್ ಕ್ಲಾತ್ ಇದೆ. ಇದರಲ್ಲಿ ಶೇಕಡ ೧೦ ಭಾಗ ಕೂಡ ರಾಷ್ಯಾದ್ಯಂತ ವಿತರಣೆಯಾಗಿಲ್ಲ. ಕರ್ನಾಟಕ ಸಹಕಾರಿ ಬಳಕೆದಾರರ ಮಹಾ ಮಂಡಲದಲ್ಲಿ ಬೇಕಾದಷ್ಟು ಬೇಲ್‌ಗಳು ಹಾಗೆಯೇ ಸ್ಟಾಕ್ ಬಿದ್ದಿವೆ. ಆದುದರಿಂದ, ಅವರಿಗೆ ಹಣ ಕೊಡುವ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀಮತಿ ಇ. ಇ. ವಾಜ್.—ಇದು ಸರ್ಕಾರದ ಗಮನಕ್ಕೆ ಬಂದು, ಎಲ್ಲೆಲ್ಲಿ ಬಟ್ಟೆಗಳನ್ನು ಮಾರಾಟ ಮಾಡುವುದಕ್ಕೆ ಸಾಧ್ಯವಾಗಿಲ್ಲ ಅದನ್ನು ವಾಪಸ್ಸು ಕಳುಹಿಸಿಕೊಟ್ಟರೆ, ಅವನ್ನು ಓಪನ್ ಮಾರುಕಟ್ಟೆಯಲ್ಲಿ ಮಾರಬಹುದು ಎಂಬ ಉದ್ದೇಶದಿಂದ ಒಂದು ಆದೇಶವನ್ನು ಸಂಬಂಧಪಟ್ಟವರಿಗೆ ಕಳುಹಿಸಿದ್ದೇವೆ ಮಾನ್ಯ ಸದಸ್ಯರು ಹೇಳುವಂಥ ಪ್ರಸಂಗಗಳು ಏನಾದರೂ ಸರ್ಕಾರದ ಗಮನಕ್ಕೆ ಬಂದರೆ, ಅದರ ಬಗ್ಗೆ ನಾವು ಸೂಕ್ತ ಏರ್ಪಾಡು ಮಾಡುತ್ತೇವೆ.

ಶ್ರೀ ಅನಿಪಾಳದ ನಂಜಪ್ಪ.—ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಸೇವಾ ಸಹಕಾರ ಸಂಘಗಳು ಜಿಲ್ಲಾ ಮಾರಾಟ ಮಳಿಗೆಯಿಂದ ಬಟ್ಟೆಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ, ಮಳಿಗೆಯವರ ಉಪಯೋಗಕ್ಕೆ ಬಾರದೇ ಇರತಕ್ಕ ರಾಂಗ್ ಕ್ಲಾತ್‌ನ್ನು ಇಷ್ಟು ಪ್ರಮಾಣದಲ್ಲಿ ತೆಗೆದುಕೊಂಡರೆ ಮಾತ್ರ ಈ ಬಟ್ಟೆಯನ್ನು ಕೊಡುತ್ತಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹೀಗೆ ಮಳಿಗೆಯವರು ಮಾಡುತ್ತಾ ಇರುವುದರಿಂದ, ಸೇವಾ ಸಹಕಾರ ಸಂಘಗಳು ಅನಿವಾರ್ಯವಾಗಿ ತಮ್ಮಲ್ಲಿ ಖರ್ಚಾಗದಿದ್ದರೂ ಸಹ ಆ ರಾಂಗ್ ಕ್ಲಾತ್‌ಗಳನ್ನು ತಂದು ಸ್ಟಾಕ್

ಕೊಳೆಹಾಕಿ, ಹಣದ ತೊಂದರೆ ಅನುಭವಿಸುತ್ತಿರುವುದೂ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೇನಾದರೂ ಬಂದಿದ್ದರೆ, ನಗಟು ಮಾರಾಟ ಮಳಿಗೆಯವರು ಈ ರೀತಿ ಹಾಕಿರತಕ್ಕ ನಿರ್ಬಂಧವನ್ನು ತೊಡೆದುಹಾಕುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ ?

ಶ್ರೀಮತಿ ಇ. ಇ. ವಾಜ್.—ಕಡ್ಡಾಯವಾಗಿ ಇಂತಿಷ್ಟು ಬಟ್ಟೆಯನ್ನು ಸೇವಾ ಸಹಕಾರ ಸಂಘಗಳವರು ಮಾರಾಟ ಮಳಿಗೆಯಿಂದ ತೆಗೆದುಕೊಳ್ಳಬೇಕೆನ್ನುವ ನಿರ್ಬಂಧ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೆ, ಅನೇಕ ಕಡೆ ಕೆಲವು ಸಹಕಾರ ಸಂಘಗಳು ಈ ಬಟ್ಟೆಗಳನ್ನು ಉದಾಸೀನ ಮನೋಭಾವನೆಯಿಂದ ಕೊಂಡುಕೊಳ್ಳುತ್ತಾ ಇಲ್ಲ. ಆದರೆ, ಹಣದ ಕೊರತೆಯಿಂದ ಕೆಲವು ಸಹಕಾರ ಸಂಘಗಳಲ್ಲಿ ಬಟ್ಟೆಯ ಸ್ಟಾಕ್ ಇರುವ ಕಡೆಗೆ ಕೇಂದ್ರ ಸರ್ಕಾರದವರು 13.69 ಲಕ್ಷ ರೂಪಾಯಿಗಳ ಸಹಾಯ ಒದಗಿಸಿ ಅನುಕೂಲ ಮಾಡಿಕೊಡುತ್ತಿದ್ದಾರೆ ಇನ್ನೂ ಏನಾದರೂ ತೊಂದರೆಗಳು ಇದ್ದರೆ, ಅದಕ್ಕೆ ಸೂಕ್ತ ಪರಿಹಾರ ಕಂಡುಹಿಡಿಯುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಪಟ್ಟಣದಲ್ಲಿ ಬಟ್ಟೆಗಳ ಹಂಚಿಕೆ ಸುಸೂತ್ರವಾಗಿ ನಡೆಯುತ್ತಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಮೂಲಕ ಹಂಚುವ ವ್ಯವಸ್ಥೆ ಇರುವಾಗ, ಅನೇಕ ಸಹಕಾರ ಸಂಘಗಳಲ್ಲಿ ಹಣ ಇಲ್ಲದೆ. ಮತ್ತೆ ಇರುವ ಬಟ್ಟೆ ಮಾರಾಟವಾಗದೆ ಇರುವುದು ನನ್ನ ಗಮನಕ್ಕೆ ಬಂದಿವೆ. ಆದುದರಿಂದ, ಯಾವ ರೀತಿಯಲ್ಲಾದರೂ ಅಲ್ಲಿ ಉಳಿದಿರುವ ಬಟ್ಟೆಗಳನ್ನು ಹಂಚಿಸುವುದಕ್ಕೆ ಏರ್ಪಾಡನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಯೇ :

ಶ್ರೀಮತಿ ಇ. ಇ. ವಾಜ್.—ಸಹಕಾರ ಸಂಘಗಳಲ್ಲಿ ಏನಾದರೂ ತೊಂದರೆಗಳು ಇದ್ದರೆ, ಅದರ ಬಗ್ಗೆ ವಿಚಾರ ಮಾಡಿ ಏನಾದರೂ ಪರಿಹಾರ ಕಂಡುಹಿಡಿಯೋಣ. ಸಹಕಾರ ಸಂಘಗಳಿಂದ ನಾವು ಉತ್ತಮ ಕಾರ್ಯ ತೆಗೆದುಕೊಳ್ಳಬೇಕೆಂದರೆ ನಾವೆಲ್ಲರೂ ಅವುಗಳ ಬಗ್ಗೆ ಹೆಚ್ಚು ಉತ್ತೇಜನ ಕೊಡಬೇಕಾದುದು ಅವಶ್ಯಕ ಎನ್ನುವ ಮಾತನ್ನು ಹೇಳಬಯಸುತ್ತೇನೆ.

## Formation of Batgira to Motakapalli road in Gulbarga District

55 Shri J. P. SARWESH (Sedam) —Will the Minister for Public Works be pleased to state :—

(*a*) whether Government is aware that Batgira to Motakapalli road in Gulbarga District is very important;

(*b*) in which year the formation of the road was taken up ;

(*c*) when it will be completed ?

Sri H. M. CHANNABASAPPA (Minister for Public Works).—

(*a*) Yes,

(*b*) During 1960-61, under Rural Communication Programme.

(*c*) It will be completed depending on the availabilty of lands as well as adequate funds under Rural Communication Programme.

SRI J. P. SARWESH.— Is it not an important road and at the same time cut short a distance of 15 miles from Sedam to Yadgir ? Will you kindly consider to take up and complete the road atleast in the coming year ?